ಪ್ರಶ್ನೆಗಳ ಪರಿಸ್ಥಿತಿಯನ್ನು ಸ್ವಲ್ಪ ಹೇಳುತ್ತೇನೆ. ಒಟ್ಟು ೯೨೯ ಪ್ರಶ್ನೆಗಳು ಬಂದಿವೆ. ಅವುಗಳಲ್ಲಿ ೭೬೧ ಪ್ರಶ್ನೆಗಳು ಉತ್ತರಿಸಲ್ಪಟ್ಟಿವೆ. ಇನ್ನೂ ೧೬೮ ಪ್ರಶ್ನೆಗಳಿಗೆ ಉತ್ತರ ಬರಬೇಕು. ೧೫ ದಿವಸಗಳೊಳಗಾಗಿ ಉತ್ತರ ಬರಬೇಕಾಗಿದ್ದು ಬಾರದೆ ಇರುವುದರಿಂದ ರಿಮೈಂಡರ್ ಮೇಲೆ ರಿಮೈಂಡರ್ ಕಳುಹಿಸಿದ್ದು ಉತ್ತರಗಳು ೧೫೫ ಪ್ರಶ್ನೆಗಳಿಗೆ ಇನ್ನೂ ಬರಬೇಕಾಗಿದೆ. ಇದು ಈಗ ಇರುವಂಥ ಪರಿಸ್ಥಿತಿ. ಉತ್ತರಗಳು ಎಷ್ಟು ಪ್ರಶ್ನೆಗಳಿಗೆ ಬರುತ್ತವೆ ಅಷ್ಟು ಪ್ರಶ್ನೆಗಳನ್ನೂ ನಾವು ಪ್ರಿಂಟ್ ಮಾಡುತ್ತಿದ್ದೇವೆ. ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಕಾರ್ಯದರ್ಶಿಗಳಿಗೆ ನಮ್ಮ ಕಾರ್ಯಾಲಯದಿಂದ ಫೋನ್ ಮಾಡುತ್ತಿದ್ದೇವೆ. ಅಲ್ಲಿಗೂ ಉತ್ತರಗಳು ಬರುತ್ತಿಲ್ಲ.

Sri H. M. CHANNABASAPPA.—May I make a submission in this behalf. I have files relating to about 14 Questions for which replies have already been sent by my department, but so far they have not been included in the list of Questions. There seems to be something wrong somewhere. The Chair may kindly look into it.

MADAM SPEAKER.—From the public works department answers for 52 questions are yet to be received.

Sri H. M. CHANNABASAPPA.—I feel that there is something wrong somewhere which the chair may kindly look into it.

MADAM SPEAKER.—I will look into it.

Sri H. S. SIDDAPPA.— In January I had sent 3 Questions which were renewed twice. I verified from the Legislature Secretariate that even though they have sent a D. O. letter they have not received replies to those Questions so far. My feeling is that there is somebody's handling in this and hence the replies are not being sent.

Strike by the House Surgeons and Statement by the Minister for Health

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ರೂಲ್ ೩೧೨ರ ಪ್ರಕಾರ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೇಳಿದ್ದೇನೆ. ಆರೋಗ್ಯ ಮಂತ್ರಿಗಳು ನಿನ್ನೆಯ ದಿವಸ ಸಭೆಯಲ್ಲಿ ಹೌಸ್ ಸರ್ಜನ್ಸ್ ವಿಚಾರದಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು. ಆದರೆ ಈ ಹೊತ್ತಿನ ಪತ್ರಿಕೆಗಳನ್ನು ನೋಡಿದ್ದರಲ್ಲಿ ಎಲ್ಲ ಆಸ್ಪತ್ರೆಗಳಲ್ಲಿಯೂ ಇವರು ಮುಷ್ಕರ ಮಾಡಿದ್ದರಿಂದ ಅಲ್ಲಿಯ ಕೆಲಸವೆಲ್ಲ ಅಸ್ತವ್ಯಸ್ತವಾಗಿದೆ ಎಂದು ವರದಿ ಯಾಗಿದೆ. ನಿನ್ನೆ ಹೇಳಿಕೆ ಕೊಡುತ್ತ ಹೌಸ್ ಸರ್ಜನ್‌ಷಿಪ್

ಕೂಡ ಪಾರ್ಟ್ ಆಫ್ ದಿ ಕೋರ್ಸ್ ಎನ್ನುವ ಅಭಿಪ್ರಾಯ ಪಟ್ಟರು. ಇದರಿಂದ ಏನು ಭಾಸವಾಗುತ್ತದೆಂದರೆ ಆಸ್ಪತ್ರೆಗಳಲ್ಲಿ ಹೌಸ್ ಸರ್ಜನರು ಇರುವುದು ಅತ್ಯಗತ್ಯವಾಗಿ ದೆಯೇ ಇಲ್ಲವೇ ಎನ್ನುವ ಪ್ರಶ್ನೆ ಬರುತ್ತದೆ. ಆಸ್ಪತ್ರೆಯಲ್ಲಿನ ಕೆಲಸಕ್ಕೆ ತೊಂದರೆ ಯಾಗಿರಬೇಕಾದರೆ ಅವರ ಸೇವೆ ಆಸ್ಪತ್ರೆಗಳಲ್ಲಿ ಅವಶ್ಯಕವಿದೆ ಎಂದು ಅರ್ಥವಾಗು ತ್ತದೆ. ಹೌಸ್ ಸರ್ಜನ್‌ಷಿಪ್ ಪಾರ್ಟ್ ಆಫ್ ದಿ ಕೋರ್ಸ್ ಆದರೆ ಅವರ ಸೇವೆಯ ಅವಶ್ಯಕತೆ ಇರುವುದಿಲ್ಲ. ಇಲ್ಲದೆ ಇದ್ದರೆ ಅತ್ಯಾವಶ್ಯಕವಾಗಿ ಅವರ ಸೇವೆ ಬೇಕಾಗು ತ್ತದೆ. ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಎಲ್ಲ ಕೆಲಸವನ್ನೂ ನೋಡಿಕೊಳ್ಳುವುದಕ್ಕೆ ತಕ್ಕಷ್ಟು ಜನರಿದ್ದರೆ ಅವರ ಸೇವೆ ಅನಾವಶ್ಯಕವಾಗುತ್ತದೆ. ಪತ್ರಿಕಾ ವರದಿಗಳನ್ನು ನೋಡಿದರೆ ಅವರ ಸೇವೆ ಆಸ್ಪತ್ರೆಗಳಿಗೆ ಬೇಕು ಎನ್ನುವ ಅಭಿಪ್ರಾಯ ನಮಗೆ ಬರುತ್ತದೆ. ಆದುದ ರಿಂದ ಮಾನ್ಯ ಆರೋಗ್ಯ ಮಂತ್ರಿಗಳು ಈ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವನ್ನು ಖಚಿತಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯಶಾಖೆಯ ಮಂತ್ರಿಗಳು).—ಅವರ ಸೇವೆಯ ಪ್ರಶ್ನೆ ಬರುವುದಿಲ್ಲ. ಅವರು ಆಸ್ಪತ್ರೆಗಳಲ್ಲಿರತಕ್ಕದ್ದು ಕೆಲಸ ಕಲಿಯುವುದಕ್ಕೆ. ಆ ಕೆಲಸಕ್ಕೋಸ್ಕರ ಅವರು ಇರಲೇಬೇಕು. ಅವರು ಇದ್ದಾರೆ ಎಂದು ವರ್ಕ್ ಲೋಡ್ ರ್ಯಾಷನೇಲ್ ಮಾಡಿಕೊಂಡಿದ್ದಾರೆ. ಈ ಹೊತ್ತು ಬೆಳಗ್ಗಿನಿಂದ ನಾನು ಕಂಟ್ಯಾಕ್ಟ್ ನಲ್ಲಿದ್ದೇನೆ. ಆಸ್ಪತ್ರೆಗಳಲ್ಲಿನ ಕೆಲಸ ಅಸ್ತವ್ಯಸ್ತವಾಗಿಲ್ಲ, ಅಲ್ಲಿರುವವರಿಗೆ ಸ್ವಲ್ಪ ಕೆಲಸ ಜಾಸ್ತಿಯಾಗಿದೆ. ಅವಶ್ಯಕವಾದರೆ ನಾವು ಹೊರಗಿನಿಂದ ಕೆಲವು ಡಾಕ್ಟರುಗಳನ್ನು ತಂದು ಹಾಕಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಆದರೆ ಹೌಸ್ ಸರ್ಜನ್‌ಗಳು ಹೋಗುತ್ತಿರತಕ್ಕ ರೀತಿ ಜನ್ನಾಗಿಲ್ಲವೆಂದು ನಾನು ಹೇಳುತ್ತೇನೆ. ನಾನು ತಿಳಿದಿರುವುದ ರಲ್ಲಿ ಆಸ್ಪತ್ರೆಯಲ್ಲಿ ಯಾರಿಗೂ ತೊಂದರೆಯಾಗಿಲ್ಲ. ಔಟ್ ಪೇಷೆಂಟ್ ಸೆಕ್ಷನ್‌ನಲ್ಲಿ ಮಾತ್ರ ಸ್ವಲ್ಪ ತೊಂದರೆಯಾಗಿರಬಹುದು. ಅಲ್ಲಿರುವ ಡಾಕ್ಟರುಗಳಿಗೆ ಸ್ವಲ್ಪ ವರ್ಕ್ ಲೋಡ್ ಜಾಸ್ತಿಯಾಗುತ್ತದೆ.

But I am sure the Doctors in the Hospitals will rise to the occasion and see that the patients do not get unduly troubled. What is being given to these people is only a stipend and not a salary. I don't know how this discrimination with regard to the payment of this stipend has been there. I would like to rationalise it. But at this time if they want to threaten the Government like this. I would be the last person to take any hasty action. All the Housemen who come there I entirely agree that they must get same thing uniformly if that is the policy of the Government, otherwise, none should get it. I am getting each point examined. I have called for reports from all other States also to know what exactly is the position. I would like to

take a very equitable view of the whole thing. Even now since my friend Mr. Kagodu Thimmappa has raised this issue I would make a last appeal to them and say that it does not pay them if they try to embrass me. If they persist to embrass they would be doing a great social injustice. I don't want them to commit that mistake, if they want to say that Government is at fault, the Government cannot do it all of a sudden. It is a matter involving a huge financial commitment. As I have got it examined it comes to some lakhs.

Now-a-days we are struggling even for one or two lakhs. That is our position this year. I can assure the House that after I have become the Health Minister I have given five to six crores of rupees more. Never before these people had such an advantegeous position as they are having today. I have created a number of posts for these people 700 to 800 posts have been created and so many posts have been upgraded. To conform to the standards of the Indian Medical Association, I have been trying to impress upon the Finance Department to see that some more finances are given. For the information of the hon. members I may say that most of these House Surgeons are not poor people's children, most of them come from affluent families. There may be some who are needy. But I do not think all of them are needy. Even now it is open to them to see reason and agree with me and simply go back to their duty and allow me an opportunity to look into their case. But let them not try to pressurise us.

ಶ್ರೀ ಕಾಗೋಡು ತಿಮ್ಮಪ್ಪ.— ಇದರಲ್ಲಿ ಅವರಿಗೆ ಆಗಿರುವ ಅವ್ಯವಸ್ಥೆಯನ್ನು ಸರಿಪಡಿಸಿ ಸರಿಯಾದ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಇಂದು ಪತ್ರಿಕೆಗಳಲ್ಲಿ ಬಂದಿರುವುದು ಒಂದು ರೀತಿಯಾಗಿರುವುದರಿಂದಾಗಿ ಇಲ್ಲಿ ನಾನು ಇದನ್ನು ಸರಕಾರದ ಗಮನಕ್ಕೆ ತರಬೇಕಾಯಿತು.

ಶ್ರೀ ಎಚ್. ಸಿದ್ದವೀರಪ್ಪ.— ನಾನು ಇಂದು ಬೆಳಗ್ಗೆ ಇಲ್ಲಿನ ಡೀನ್‌ರವರೊಡನೆ ಕಲೆತು ವಿಚಾರ ಮಾಡಿದ್ದೇನೆ. ಆಸ್ಪತ್ರೆಗಳಲ್ಲಿ ಬರುವ ರೋಗಿಗಳಿಗೆ ಯಾವ ವಿಧವಾದ ತೊಂದರೆಗಳೂ ಆಗದಂತೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ.

These young men were working there. Naturally when the staff is less there would be some difficulty. ಮಾನ್ಯ ಸದಸ್ಯರು ಆಸ್ಪತ್ರೆಗಳಲ್ಲಿ ಹೋಗಿ ನೋಡಿದರೆ ಎಷ್ಟು ಜನ ಕ್ಯೂನಲ್ಲಿ ಬಹಳ ಹೊತ್ತಿನಿಂದ ಕಾದಿರುತ್ತಾರೆನ್ನುವುದು ಅವರಿಗೂ ಚೆನ್ನಾಗಿ ಅರ್ಥವಾಗುತ್ತದೆ.

There are bound to be some inconveniences in this country-we are putting up with a number of such difficulties. But I can assure the House that I will not allow the work in the hospitals to get paralised.

ಶ್ರೀ ಹೆಚ್. ಎಸ್. ಸಿದ್ದಪ್ಪ.— ಸ್ವಾಮೀ, ಮಾನ್ಯ ಮಂತ್ರಿಗಳು ಇಲ್ಲಿ ಹೌಸ್ ಸರ್ಜನ್‌ಗಳ ಬಗ್ಗೆ ಹೇಳುತ್ತಾ ಇದು ಒಂದು ರೀತಿಯಾಗಿ ಕೊಡುವ ಭಕ್ಷೀಸ್ ಬಾಕಿ ಡಾಕ್ಟರುಗಳಿಗೆ ಕೊಡುವ ಹಾಗೆ ಇದು ಸ್ಟ್ಯಾಚುಟರಿ ಸಂಬಳವಲ್ಲ ಎಂದು ಹೇಳಿದರು, ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೇಳಿದಂತೆ ಇಲ್ಲ ಇದನ್ನು ಸರಿಯಾಗಿ ಕೊಡುವಂತೆ ಮಾಡಿ ಇಲ್ಲವೇ ಪೂರ್ಣವಾಗಿ ತಪ್ಪಿಸಿಬಿಡಿ. It is not a statutory salary.

ಶ್ರೀ ಎಚ್. ಸಿದ್ದವೀರಪ್ಪ.— ಇವರಿಗೆ ಕೊಡುತ್ತಿರುವುದು ಬಕ್ಷೀಸ್ ಅಲ್ಲ. ಇದು ಅವರು ಮಾಡುವ ಕೆಲಸಕ್ಕೆ ಸ್ಟೈಪೆಂಡ್ ಎಂದು ಕೊಡಲಾಗುತ್ತಿದೆ.

MADAM SPEAKER.— It is something like a scholarship.

Application of Rule 312 about admission of Notices

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್)— ನಾನು ತಮ್ಮ ಕಡೆಗೆ ರೂಲು ೩೧೨ರ ಕೆಳಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು.— ತಾವು ದಯವಿಟ್ಟು ಕಳಿತುಕೊಳ್ಳಬೇಕು. ಈಗ ಅದರ ಬಗ್ಗೆ ಇಲ್ಲಿ ಹೇಳುವುದು ಬೇಡ.

ಶ್ರೀ ವಿ. ಎನ್. ಪಾಟೀಲ್.— ನಾನು ಒಬ್ಬರು ಪೋಲೀಸು ಹೆಡ್ ಕಾನಸ್ಟೇಬಲ್ ಬಗ್ಗೆ ನಡೆದ ಅವ್ಯವಸ್ಥೆಗಳ ಬಗ್ಗೆ ನೋಟೀಸು ಕಳುಹಿಸಿದೆ. ಇದರ ಮಿನಿಸ್ಟರು ಇಲ್ಲಿರುವುದರಿಂದ ತಾವು ಅವರ ಕಡೆಯಿಂದ ಇಲ್ಲಿ ಹೇಳಿಕೆ ಕೊಡಿಸ ಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು.— ನಾನು ನೋಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.— ನಾನು ಎರಡು ಪ್ರಶ್ನೆಗಳನ್ನು ಕಳಿಸಿದ್ದೆ. ಇದರಲ್ಲಿ ಒಂದು ಪ್ರಶ್ನೆಗೆ ಮಾತ್ರ ಇಲ್ಲಿ ಉತ್ತರ ಬಂದಿದೆ. ಬಾಕಿ ಉಳಿದಿರುವ ಇನ್ನೊಂದು ಪ್ರಶ್ನೆಗೂ ತಾವು ಉತ್ತರವನ್ನು ತರಿಸಿಕೊಡಬೇಕು ಎಂದು ಇಲ್ಲಿ ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು.— ನಾನು ತಮಗಾಗಿಯೇ ಸರಕಾರದವರಲ್ಲಿ ಸ್ಪೆಷಲ್ ಆಗಿ ಮನವಿ ಮಾಡುತ್ತಿದ್ದೇನೆ, ಅವರ ಕಡೆಯಿಂದ ನೋಡಿ ತರಿಸಿಕೊಡುತ್ತೇನೆ.

ಶ್ರೀ ವಿ. ಎನ್. ಪಾಟೀಲ್.— ನಾನು ತಮ್ಮಲ್ಲಿ ಒಂದು ಮನವಿ ಮಾಡ ಬೇಕಾಗಿದೆ.

ಅಧ್ಯಕ್ಷರು.— ಈಗ ಇದರ ಬಗ್ಗೆ ಇಲ್ಲಿ ತಾವು ಏನನ್ನೂ ಪ್ರಸ್ತಾಪ ಮಾಡ ಬಾರದು.

ಶ್ರೀ ವಿ. ಎನ್. ಪಾಟೀಲ್.— ನಾನು ತಮ್ಮಲ್ಲಿ ಸ್ಪೆಷಲ್ ಆಗಿ ಪ್ರಾರ್ಥನೆ ಮಾಡುತ್ತಿದ್ದೇನೆ. ನಾನು ಹೇಳುವುದನ್ನು ತಾವು ತಪ್ಪು ತಿಳಿದುಕೊಳ್ಳಬಾರದು.

Sri H. M. CHANNABASAPPA (Minister for Public Works).— I rise to a Point of Order. It is not open to any hon. member of this House to give a direction to the Chair to sit down.

Sri C. M. ARUMUGHAM.— The hon. Minister while raising a Point of Order has given the Ruling himself.

MADAM SPEAKER.— He did not mean it !

ಶ್ರೀ ವಿ. ಎನ್. ಪಾಟೀಲ್.— ನಾನು ರೂಲು ೩೧೨ರ ಪ್ರಕಾರ ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು.— ನಾನು ರೂಲು ೩೧೨ರ ಬಗ್ಗೆ ರೂಲಿಂಗು ಕೊಟ್ಟಿದ್ದೇನೆ. ರೂಲು ೩೧೨ರ ಪ್ರಕಾರ ನೋಟೀಸು ಬಂದಾಗ ಅದನ್ನು ಪರಿಶೀಲಿಸಿದ್ದೇನೆ. ಆದರೆ ಅದನ್ನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ಪರಿವರ್ತಿಸಿ ಸರಕಾರದ ಹೇಳಿಕೆ ತರಿಸಿಕೊಡಲಾಗುತ್ತಿದೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ.— ಮಾನ್ಯ ಅಧ್ಯಕ್ಷರೇ, ರೂಲು ೩೧೨ರ ಬಗ್ಗೆ ರೂಲಿಂಗ ಕೊಟ್ಟಿದ್ದೇನೆಂದು ಹೇಳಿದಿರಿ. ಇದರ ಅರ್ಥ ಇನ್ನು ಮುಂದೆ ಈ ಸದನದ ಸದಸ್ಯರು ಯಾರೂ ರೂಲು ೩೧೨ರ ಕೆಳಗೆ ಯಾವ ತರಹದ ನೋಟೀಸನ್ನೂ ಕಳುಹಿಸಬಾರದು ಎಂದು ಇದರ ಅರ್ಥವೇ ಹೇಗೆ ಎನ್ನುವುದು ತಿಳಿಯಲಿಲ್ಲ.

ಅಧ್ಯಕ್ಷರು.— ರೂಲು ೩೧೨ರ ಕೆಳಗೆ ನೋಟೀಸು ಬಂದಾಗ ಅದನ್ನು ತರಿಸಿ ಪರಿಶೀಲನೆ ಮಾಡಿದ್ದೇನೆ. ಅದು ಅಜೆಂಡಾದಲ್ಲಿ ಬರುವಾಗ ಕೊನೆಯಲ್ಲಿ ತರಬೇಕಾಗುತ್ತದೆ. ಇದರ ಬಗ್ಗೆ ರೂಲಿಂಗು ಆಗಲೇ ಕೊಡಲಾಗಿದೆ. ಮಾನ್ಯ ಸದಸ್ಯರು ರೂಲಿಂಗನ್ನು ತರಿಸಿ ಓದಿ ನೋಡಬಹುದು.